■ ವಿಶಾಖ ಎನ್.

# ಒಂದು ಎಪಿಸೋಡಿಗೆ ಐದೇ ಕೋಟಿ



ಮಾಗಿದ ನಟರು ಆರ್ಥಿಕ ಸಂಕಷ್ಟದಿಂದ ಹೊರಬರುವ ಹೊಸಕಾಲದ ಕಥನಗಳು ಆಸಕ್ತಿಕರವಾಗಿವೆ. 'ವಿಕ್ರಂ' ತಮಿಳು ಸಿನಿಮಾದ ಯಶಸ್ಸು ಕಮಲ್ ಹಾಸನ್ ಮಾಡಿದ್ದ ಸಾಲವನ್ನೆಲ್ಲ ಕೊಡವಿಕೊಂಡು ಮೇಲೇಳಲು ಇಂಬುಗೊಟ್ಟಿತ್ತು. 'ಮನಿಕಂಟ್ರೋಲ್'ನಲ್ಲಿ ಮೊನ್ನೆ ಪ್ರಕಟವಾದ ವರದಿಯೊಂದು ಅಮಿತಾಭ್ ಬಚ್ಚನ್ ಸಂಭಾವನೆಯ ಸುತ್ತ ಚರ್ಚೆಯನ್ನು ಕಟ್ಟಿಕೊಟ್ಟಿದೆ.

'ಕೌನ್ ಬನೇಗಾ ಕರೋಡ್‌ಪತಿ' ಪ್ರಶ್ನೆ ಕೇಳುವ ಹಿಂದಿ ಕಾರ್ಯಕ್ರಮ ತನ್ನದೇ ರುಜು ಹಾಕಿ ವರ್ಷಗಳೇ ಉರುಳಿವೆ. 16ನೇ ಸೀಸನ್ ನಡೆಸಿಕೊಡಲು ಅಮಿತಾಭ್ ನಿಗದಿಪಡಿಸಿರುವ ಸಂಭಾವನೆ ಪ್ರತಿ ಕಂತಿಗೆ ₹5 ಕೋಟಿ ಎನ್ನುವುದು ಆ ವರದಿಯ ಮುಖ್ಯ ವಿಷಯ.

2000ನೇ ಇಸವಿಯಲ್ಲಿ 'ಕೌನ್ ಬನೇಗಾ ಕರೋಡ್‌ಪತಿ' ಶುರುವಾದದ್ದು. ಆಗ ಒಂದು ಕಂತಿಗೆ ಅಮಿತಾಭ್ ₹25 ಲಕ್ಷ ಸಂಭಾವನೆ ಪಡೆದಿದ್ದರು. ಮೂರನೇ ಋತು ಶುರುವಾಗುವ ಹೊತ್ತಿಗೆ ಸಂಭಾವನೆ ದುಪ್ಪಟ್ಟಾಯಿತು. ಆರನೇ ಕಂತಿನಿಂದ ಏಳನೇ ಕಂತಿನ ಹೊತ್ತಿಗೆ ಮುಪ್ಪಟ್ಟನ್ನೂ ದಾಟಿ ಒಂದು ಕಂತಿಗೆ ₹2 ಕೋಟಿಗೆ ತಲುಪಿತು. ಹತ್ತನೇ ವರ್ಷದ ಕಾರ್ಯಕ್ರಮ ಪ್ರಸಾರವಾಗುವ ಹೊತ್ತಿಗೆ 3 ಕೋಟಿ ರೂಪಾಯಿ ಸಂಭಾವನೆಯನ್ನು ಪ್ರತಿ ಕಂತಿಗೆ ಅಮಿತಾಭ್ ಚಾರ್ಜ್ ಮಾಡಿದ್ದರು. 13ನೇ ಋತುವಿನವರೆಗೆ ₹3.5 ಕೋಟಿ ದಾಟಿರಲಿಲ್ಲ. ಈಗ ₹5 ಕೋಟಿಯ ಮೈಲಿಗಲ್ಲು.

ಎರಡನೇ ಋತುವಿನಲ್ಲಿಯೇ ಅಮಿತಾಭ್, ಅನಾರೋಗ್ಯದ ಕಾರಣದಿಂದಾಗಿ ಕೆಲವು ಎಪಿಸೋಡ್‌ಗಳನ್ನಷ್ಟೆ ಮಾಡಲು ಸಾಧ್ಯವಾಗಿತ್ತು. ಆಗ ಶಾರುಕ್ ಖಾನ್ ಕಾರ್ಯಕ್ರಮ ನಡೆಸಿಕೊಟ್ಟಿದ್ದರು. ಆದರೆ, ಪ್ರೇಕ್ಷಕರು ಆ ಕುರ್ಚಿಗೆ ಅಮಿತಾಭ್ ಅವರೇ ಭೂಷಣ ಎಂದು ಅಭಿಪ್ರಾಯಪಟ್ಟರು. ಹೀಗಾಗಿ ಮತ್ತೆ ಮತ್ತೆ ಅವರೇ ಕಾರ್ಯಕ್ರಮ ನಡೆಸಿಕೊಡುತ್ತಾ, ಜನಪ್ರಿಯತೆಯನ್ನೂ ಹೆಚ್ಚಿಸಿಕೊಂಡರು.

'ಕಲ್ಕಿ...' ತೆಲುಗು ಸಿನಿಮಾ ಯಶಸ್ಸಿನ ನಂತರ ಸಹಜವಾಗಿಯೇ ಅಮಿತಾಭ್ ಅವರ ಮಾರುಕಟ್ಟೆ ಮೌಲ್ಯ ವರ್ಧಿಸಿದೆ. ಟಿ.ಜೆ. ಜ್ಞಾನವೇಲು ಸಜ್ಜುಗೊಳಿಸುತ್ತಿರುವ ಸಾಹಸಪ್ರಧಾನ ಚಿತ್ರ 'ವೆಟ್ಟೈಯನ್' ಮೂಲಕ ತಮಿಳಿನಲ್ಲಿ ಮೊದಲ ಬಾರಿಗೆ ನಟಿಸಲು ಅಮಿತಾಭ್ ಒಪ್ಪಿದ್ದಾರೆ. ಈ ಚಿತ್ರದಲ್ಲಿ ಅವರು ಹಾಗೂ ರಜನೀಕಾಂತ್ ತೆರೆ ಹಂಚಿಕೊಳ್ಳಲಿದ್ದಾರೆ ಎನ್ನುವುದು ಬೋನಸ್ ಸುದ್ದಿ.

ಮೈತುಂಬಾ ಸಾಲಮಾಡಿಕೊಂಡು ಎರಡು ದಶಕಗಳ ಹಿಂದೆ ಸಂಕಷ್ಟದಲ್ಲಿದ್ದ ಅಮಿತಾಭ್ ಅವರೀಗ ಚಾಲ್ತಿಯಲ್ಲಿರುವ ಹಿರಿಯ ನಟ ಎಂದೇ ಪರಿಗಣಿತರಾಗಿದ್ದಾರೆ. ಅಂದಹಾಗೆ, ಅವರ ವಯಸ್ಸೀಗ ಕೇವಲ 81 ವರ್ಷ. ಅವರಿಗಿಂತ ಇನ್ನೊಬ್ಬ ಪ್ಯಾನ್–ಇಂಡಿಯಾ ನಟ ಸದ್ಯಕ್ಕೆ ಕಾಣಲಿಕ್ಕಿಲ್ಲ. ■



# 'ಗೋಟ್' ಕಡೆ ದೊಡ್ಡ ತಾರಾಪಡೆ

ಪ್ರಭುದೇವ, ಮೀನಾಕ್ಷಿ ಚೌಧರಿ, ಲೈಲಾ, ಮೋಹನ್ ಜಯರಾಂ, ಪಾರ್ವತಿ ನಾಯರ್, ವೈಭವ್, ಅಜಯ್ ರಾಜ್, ಅರವಿಂದ್ ಆಕಾಶ್ – ಹೀಗೆ ತಾರಾಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಅಷ್ಟೇ ಅಲ್ಲ, ಅಗಲಿದ ನಟ ವಿಜಯಕಾಂತ್ ಕೂಡ ಒಂದು ಪಾತ್ರವಾಗಿ ತೆರೆಮೇಲೆ ಬರಲಿದ್ದಾರೆ. ಇದನ್ನು ತಂತ್ರಜ್ಞಾನ ಸಾಧ್ಯವಾಗಿಸಿದೆ. ಕೃತಕ ಬುದ್ಧಿಮತ್ತೆಗೆ ಜಯವಾಗಲಿ.

'GOAT' ಎಂದು ಈ ತಮಿಳು ಚಿತ್ರದ ಹೆಸರು. ವಿಸ್ತರಿಸಿ ಬರೆದರೆ, 'Greatest of All Time' ಎಂದಾಗುತ್ತದೆ. ತಲಪತಿ ವಿಜಯ್ ನಾಯಕ ಅಂದಮೇಲೆ ವೋಲ್ಟೇಜಿಗೇನೂ ಕೊರತೆ ಇರಲಾರದು. ಈ ಸಿನಿಮಾದ ವಿಶೇಷಗಳು ಹೀಗೆ ಒಂದೊಂದಾಗಿ ಅನಾವರಣಗೊಳ್ಳುತ್ತಿವೆ.

ವೆಂಕಟ್ ಪ್ರಭು ನಿರ್ದೇಶನದ ಈ ಚಿತ್ರ ಸೈ–ಫೈ ವಸ್ತುವನ್ನು ಒಳಗೊಂಡಿದೆ. ಸೆಪ್ಟೆಂಬರ್ 5ರಂದು ತೆರೆಕಾಣಲಿದ್ದು, ಮೊದಲಿಗೆ 'ಐಮ್ಯಾಕ್ಸ್' ತಂತ್ರಜ್ಞಾನಕ್ಕೆ ಪೂರಕವಾಗಿ ಬರಲಿದೆ ಎನ್ನಲಾಗಿತ್ತು. ಈಗ 'ಎಪಿಕ್' ಫಾರ್ಮ್ಯಾಟ್‌ನಲ್ಲೂ ತೆರೆಕಾಣಲಿರುವುದು ಸಿನಿಮಾ ತಂತ್ರಜ್ಞಾನಮೋಹಿಗಳಿಗೆ ಖುಷಿ ಕೊಡುವ ಸಂಗತಿ.

ಯುವನ್ ಶಂಕರ್ ರಾಜಾ ಸ್ವರ ಸಂಯೋಜನೆ ಮಾಡಿರುವ ಹಾಡುಗಳಿರುವ ಚಿತ್ರವಿದು. ಗತ ಬದುಕಿನ ಸತ್ಯವೊಂದು ಅನಾವರಣಗೊಳ್ಳುವ ವಸ್ತುವನ್ನು ಒಳಗೊಂಡಿರುವ ಸಿನಿಮಾದಲ್ಲಿ ವಿಜಯ್ ಎರಡು ಶೇಡ್‌ಗಳಲ್ಲಿ ಅಭಿಮಾನಿಗಳ ಮನರಂಜಿಸಲಿದ್ದಾರೆ ಎಂದು ನಿರ್ದೇಶಕರು ಹೇಳುತ್ತಿದ್ದಾರೆ.

ಕೆಲವು ವರ್ಷಗಳಿಂದ ವಿಜಯ್ ಯಶಸ್ಸಿನ ಗ್ರಾಫ್ ಚೆನ್ನಾಗಿರುವುದರಿಂದ ಈ ಸಿನಿಮಾ ಮೇಲೆ ನಿರೀಕ್ಷೆಯ ಭಾರವಂತೂ ಇದೆ. ■